

ಬಯಕೆಗಳಿಗೆ ಇಂಬು ಕೊಡುವ ಬೃಹತ್ ಗಂಟೆಗಳು



ವಿವಿಧ ಗಾತ್ರಗಳ ನಾಗನ ವಿಗ್ರಹಗಳಿಗೆ ಪೂಜೆ

ಮರಕ್ಕೆ ಈಗ ಐನೂರು ವರುಷಗಳ ಆಯಸ್ಸು! ಮರದ ಹಲವು ಭಾಗಗಳು ಪ್ರಕೃತಿಯ ವಿಕೋಪಕ್ಕೆ ಸಿಲುಕಿ ಉರುಳಿದರೂ, ಇನ್ನೊಂದಷ್ಟು ಭಾಗ ಹಾಗೆಯೇ ನಿಂತಿದೆ. ಅದರ ರೆಂಬೆಗಳಿಗೆ ಕಟ್ಟಿಗೆಗಳ ಆಧಾರ ಕೊಡಲಾಗಿದೆ.

ಮಂದಿರದ ಹೊರಭಾಗದ ಗೋಡೆಗಳ ಮೇಲೆ ಬುದ್ಧನ ಜೀವನಗಾಥೆ ಹೇಳುವ ವಿಗ್ರಹಗಳನ್ನು ಅಳವಡಿಸಲಾಗಿದೆ. ಮಳೆ–ಗಾಳಿ ಹೊಡೆತಕ್ಕೆ ಸಿಲುಕಿದರೂ ಅವು ಗಟ್ಟಿಯಾಗಿ ನಿಂತಿವೆ. ವಿಶಾಲ ಆವರಣದ ನಾಲ್ಕು ಮೂಲೆಗಳಲ್ಲಿ ಸ್ತೂಪಗಳೂ ಅದರಲ್ಲಿ ಬುದ್ಧನ ವಿಗ್ರಹಗಳನ್ನೂ ಹೊಂದಿದ ರಚನೆಗಳಿವೆ. ಆ ಪೈಕಿ ಒಂದು ಸ್ತೂಪದಲ್ಲಿ ರಾಜ ತಿಲೋಕರಥನ ಅಸ್ಥಿಗಳನ್ನು (ಆತ 1487ರಲ್ಲಿ ಮೃತಪಟ್ಟ) ಇಡಲಾಗಿದೆ. ಗೌತಮನು ತಪಸ್ಸು ಮಾಡುವಾಗ ಸುರಿಯುತ್ತಿದ್ದ ಮಳೆಯಿಂದ ಬೃಹತ್ ಸರ್ಪವು ಆತನಿಗೆ ಆಶ್ರಯ ನೀಡಿದ್ದನ್ನು ನೆನಪಿಸುವ ಪ್ರತಿಕೃತಿಯೊಂದು ದಕ್ಷಿಣ ಭಾಗದಲ್ಲಿದೆ. ಇದಲ್ಲದೇ ಬುದ್ಧನು ಧ್ಯಾನ ಮಾಡುವ ವಿವಿಧ ಭಂಗಿಗಳ ವಿಗ್ರಹಗಳೂ ಗಮನಸೆಳೆಯುತ್ತವೆ.

ಪರಂಪರೆಯನ್ನು ಬೆನ್ನಿಗಿಟ್ಟುಕೊಂಡು ಈಗಲೂ ದೇಶ ವಿದೇಶಗಳ ಬೌದ್ಧ ಧರ್ಮೀಯರನ್ನು ಆಕರ್ಷಿಸುತ್ತಿರುವ ವಾತ್ ಚೆದ್ ಯಾತ್, ಬೌದ್ಧ ಬಿಕ್ಕುಗಳ ಮೆಚ್ಚಿನ ಕ್ಷೇತ್ರ. ಅಧ್ಯಯನ ನಡೆಸಲು ಬೇರೆ ಬೇರೆ ದೇಶಗಳಿಂದ ಬಂದು ಇಲ್ಲೇ ಉಳಿಯುವ ಬೌದ್ಧಸನ್ಯಾಸಿಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸುವ ಅಚ್ಚುಕಟ್ಟಾದ ವಸತಿ ಸಂಕೀರ್ಣಗಳು ಮಂದಿರದ ಸುತ್ತಮುತ್ತ ಇವೆ. ಉಳಿದಂತೆ, ಥಾಯ್ಲೆಂಡಿಗೆ ಬರುವ ಪ್ರವಾಸಿಗರು ಈ ಸೊಬಗಿನ ತಾಣಕ್ಕೆ ಭೇಟಿ ಕೊಟ್ಟು, ಅರ್ಧ ಅಥವಾ ಇಡೀ ದಿನ ಇರುತ್ತಾರೆ. ಮಂದಿರ ನಿರ್ಮಾಣ ಅಧ್ಯಯನ ಮಾಡುವವರಿಗೆ ಇದು ಅಚ್ಚುಮೆಚ್ಚಿನ ದೇಗುಲ.

ಮಂದಿರದ ಒಂದು ಬದಿಯಲ್ಲಿ ಬೃಹತ್ ಗಾತ್ರದ ಗಂಟೆಗಳನ್ನು ಅಳವಡಿಸಲಾಗಿದೆ. ಅವುಗಳಿಗೆ ಜೋಡಿಸಿದ ಹಗ್ಗವನ್ನು ಜಗ್ಗಿದಾಗ ಹೊರಡುವ ನಿನಾದವು ಬಹು ದೂರದವರೆಗೂ ಕೇಳುತ್ತದೆ.

‘ಮನಸ್ಸಲ್ಲಿ ಬುದ್ಧನನ್ನು ಸ್ಮರಿಸಿಕೊಂಡು, ಏನಾದರೂ ಬೇಡಿಕೆ ಮಂಡಿಸಿ ಗಂಟೆ ಬಾರಿಸಿದರೆ, ನಿಮ್ಮ ಮನದ ಆಸೆ ಈಡೇರುತ್ತದೆ. ಇದು ಇಲ್ಲಿನ ನಂಬಿಕೆ’ ಎಂದು ಹೇಳಿದ ಬೌದ್ಧ ಬಿಕ್ಕುವೊಬ್ಬರು, ‘ನೀವೂ ಏನಾದರೂ ಕೇಳಿಕೊಂಡು ಗಂಟೆ ಬಾರಿಸಬಹುದು’ ಎನ್ನುತ್ತ ಹಗ್ಗ ಜಗ್ಗಿದರು. ಅವರ ಜತೆಗಿದ್ದ ಮತ್ತಷ್ಟು ಸನ್ಯಾಸಿಗಳು ಮೆಲುದನಿಯಲ್ಲಿ ಜಪಮಾಡುತ್ತ ಒಂದೊಂದು ಗಂಟೆಯನ್ನು ಬಾರಿಸಿದರು. ಮಣಭಾರದ ಗಂಟೆಗಳಿಂದ ಹೊಮ್ಮಿದ ಇಂಪು ನಿನಾದ ಮಂದಿರವನ್ನೆಲ್ಲ ಆವರಿಸಿ ಮನಸ್ಸನ್ನು ಪ್ರಫುಲ್ಲಗೊಳಿಸಿತು. ಅದೇ ಕ್ಷಣಕ್ಕೆ, ದುಃಖಕ್ಕೂ ಬಯಕೆಗಳಿಗೂ ಇರುವ ಸಂಬಂಧವನ್ನು ಕಾಣಿಸಿದ ಮಹಾಗುರುವಿನ ಸನ್ನಿಧಾನದಲ್ಲಿ ಆಸೆಗಳ ಮಹಾಪೂರವೇ ಇರುವಂತೆ ಆ ಗಂಟೆ ಸದ್ದು ಭಾಸವಾಯಿತು.

ಪ್ರತಿಕ್ರಿಯಿಸಿ: feedback@sudha.co.in